900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜೇಗವ್ವಡ, ಮಾದಮ್ಮ ಇವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದುಂ ಡೇಗವ್ವಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಸೆಪ್ಟಂಬರು ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 506.

ಮೃತಪಟ್ಟ ಕಂಚುಗಾರ ಗುರುವಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕಪನಯ್ಯನು ಮೃತಪಟ್ಟ ಸದರೀ ಗುರುವಯ್ಯನವರಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ವಳವಳ್ಳಿ ಕಸಬಾ ಸ್ಥಳದ ಸದರೀ ಕಪನಯ್ಯನು ಸದರೀ ವಾಸಸ್ಥನಾಗಿ ಮೃತಪಟ್ಟ ಗುರುವಯ್ಯನವರ ಜಿಂದಗೀ ಬಗ್ಯಾಗಿ ಬರತಕ್ಕ 800 ರೂ ಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕಪನಯ್ಯನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುವಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಸೆಪ್ಟಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಸ್. ಹೇವಾಜಿರಾವ್,
ಡಿಸ್ಟ್ರಿಕ್ಟು ಜಡ್ಜ.

ಮೈಸೂರು ಡಿಸ್ಟ್ರಿಕ್ಟು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರಲ್ಲಿರುವ ಸವಾರ್ ಇಲಾಖಾ ಪೇಷ್ಕಾರ್ ಮಂಡ್ಯಗಿರೀ ಕೃಷ್ಣರಾಯನ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂಬರ್ 142.

ಹುಕ್ಕುಂ.

ಮೇಲ್ಕಂಡ ಕೃಷ್ಣರಾಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಕೃಷ್ಣರಾಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದ 5ನೇ ಗೋಪಾಲಕಟ್ಟೆ ಖುದ್ದು ಹಾಜರು 14ನೇ ಕೃಷ್ಣಾಚಾರೀ ಕಡೇ ಫಸ್ಟ್‌ಗ್ರೇಡ್ ಪ್ಲೀಡರ್ ವೆಂಕೋಬರಾಯರು ಹಾಜರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—1ನೇ ವಡೀಸ್ವಾಮಿರಾಯಚಾರಿ 2ನೇ ಸುಪ ತ್‌ಕುಮಾರೀ ಬ್ಯಾಂಕ್ 3ನೇ ಖಾಂಸಾಬ್ 4ನೇ ಬುಡ್ಣಾಸಾಬಿ 6ನೇ ಮೈಸೂರು ಬ್ಯಾಂಕ್ 7ನೇ ಭಾಗೀರಥಿಬಾಯಿ 8ನೇ ಬಸಪ್ಪ 9ನೇ ಕೀತಮ್ಮ 10ನೇ ರಂಗಪ್ಪ 11ನೇ ಗೋವಿಂದಭೀಮಾಜಿ 12ನೇ ಮಲ್ಲಕಿಟ್ಟಿ 13ನೇ ಆಲಪ್ಪ 15ನೇ ಶೇಷಗಿರಿರಾವ್ 16ನೇ ದೇವಾಜೀ ಡೋ ಲಾಜೀ ತಂದೇ ನವಲಾಜಿ 17ನೇ ರಂಗಪ್ಪ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪೇಷ್ಕಾರ್ ಕೃಷ್ಣರಾಯನು ಹೊಂದುವ ದಕ್ಕೆ ಹಕ್ಕುದಾರನಾಗುವದರ ಮೂಲಕ್ಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂ ದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡ ಲ್ಪಟ್ಟುನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1887ನೇ ಇಸವಿ ಆಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟು ವೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸೂಲದಪಟ್ಟ್.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಕೊಬಲಿಗ್ಗೆ.	ಯಾವಾಗ ದೇಣೇ ಕೊಡಬೇಕೂ ಅದರ ಪೂರ್ತಿ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇ ನಾದರೂ ಇದ್ದರೆ.	ಷರಾ.
1	ಶಿವಮೊಗ್ಗೇಲಿರುವ ವಡೀಸ್ವಾಮಿರಾಯಾಚಾರಿ ..	89 3 4	..	ಡಿಕ್ರೀ ಬಾಬತು	
12	ಮೈಸೂರಲ್ಲಿರುವ ಮಲ್ಲಕ್ಕಟ್ಟ	.. 44 0 8	..	ಡಿಟೋ	
13	ಡಿಟೋ ಕುರ್ದೂಬಾನ ಮಗ ಆಲಪ್ಪ	.. 33 8 6	.	ಡಿಟೋ	
14	ಹೊಳೇನರಸೀಪುರದ ಕೃಷ್ಣಾಚಾರಿ	.. 212 0 0	..	ಡಿಟೋ	
15	ಶಿವಮೊಗ್ಗೆಯಲ್ಲಿರುವ ತಿಮ್ಮಯ್ಯ ಘಾತಿ ವಾರಸ್ದಾರ್ ಶೇಷಗಿರಿರಾವು	.. 251 0 0	..	ಡಿಟೋ	
16	ಡಿಟೋ ವೂರು ದೇವಾಜೀ ಜೋಲಾಜಿ	.. 350 0 0	..	ಡಿಟೋ	
17	ಡಿಟೋ ರಂಗಪ್ಪ	.. 30 0 6	..	ಡಿಟೋ	
		1019 13 0			

ದಿವಾಳೀಯೂದ ಡಿಕ್ರೀ ದೇಣೇದಾರ ಹಾಸನದಲ್ಲಿರುವ ನಾಯಿಕ ಮಹಮ್ಮದ್ ಯೂಸುಫನ ವಿಷಯದಲ್ಲಿ—

ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 169.

ಹುಕ್ಕುಂ.

ಮೇಲ್ಕಂಡ ಮಹಮ್ಮದ್ ಯೂಸುಫನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂ ಬರೂ ಅರ್ಜೀದಾರನಾದ ಮಹಮ್ಮದ್ ಯೂಸಫನ ಪರವಾಗಿ ಫರ್ಸ್ಟ್ ಗ್ರೇಡ್ ಪ್ಲೀಡರ್ ಯಲ್. ನರಸಿಂಗರಾಯರನ್ನು ಮತ್ತು ಸದರೀಯವನೆ ಲೇಣೇದಾರ್ರಾದವರಿಗೂ ದರ್ಖಾಸ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಖಾಸ್ತ್ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ --1 ಖಾದರಬೀ ಮೈನರ್‌ಗಾರ್ಡಿಯ್ಯ ಸೈದಲ್ಲೀಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮಹಮ್ಮದ್ ಯೂಸುಫನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನು ನಿರ್ಬಂಧವಿಂದ ವಿಮೋಚನೆಯೇ ಮಾಡಿರುವದಲ್ಲದೇ ಇದಕ್ಕೆ ಲಗ್ನತ್ತಾಗಿರುವ ಪಟ್ಟ್ಯಯಲ್ಲಿ ಕಂಡ ಯಾವ ಸೂಲಕ್ಕೂ ಸ್ತ್ರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಅಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟು ಮೋರ್ ನಿಂ ನಮ್ಮ ದಸ್ತ ಖತ್ತೊಡನೇ ಕೊಡಲ್ಪಟ್ಟಿತು.

ಸೂಲದಪಟ್ಟ್.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಕೊಬಲಿಗ್ಗು.	ಯಾವಾಗ ದೇಣೇ ಕೊಡಬೇಕೂ ಅದರ ಪೂರ್ತಿ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇ ನಾದರೂ ಇದ್ದರೆ.	ಷರಾ.
1	ಹಾಸನದಲ್ಲಿರುವ ಖಾದರಬೀ ಮೈನರ್‌ಗಾರ್ಡಿಯ್ಯ ಸೈದಲ್ಲೀಸಾಬ್. ..	115 0 0	..	ಡಿಕ್ರೀ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್, ಸಬ್ ಜಡ್ಜ್.

Mysore Government Press, Bangalore.—1887.